ಎಂ ವಿ ಸಿ.ನಂ. 276/2023 ಪಿಡಬ್ಲೂಃ 1

ದಿನಾಂಕಃ 27-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿಃ ಶ್ರೀ ಎ ವಿ ಎನ್ ವಕೀಲರಿಂದಃ**

3. ಅಪಘಾತ ಸ್ಥಳದ ಪಂಚನಾಮೆಯ ದೃಢಿಕೃತ ನಕಲನ್ನು ನಿಪಿ-5 ಎಂದು, ಅಪಘಾತ ಸ್ಥಳದ ಕಚ್ಚಾ ನಕಾಶೆಯ ದೃಢಿಕೃತ ನಕಲನ್ನು ನಿಪಿ-6 ಎಂದು, ಅಪಘಾತಕ್ಕೆ ಒಳಪಟ್ಟ ವಾಹನಗಳ ಪಂಚನಾಮೆಯ ದೃಢಿಕೃತ ನಕಲನ್ನು ನಿಪಿ-7 ಎಂದು, ಐ ಎಮ್ ವಿ ವರದಿಯ ದೃಢಿಕೃತ ನಕಲನ್ನು ನಿಪಿ -8 ಎಂದು, ಸಿಸಿ ನಂ.478/2023 ಆದೇಶ ಪುಟಗಳ ದೃಢಿಕೃತ ನಕಲನ್ನು ನಿಪಿ-9 ಎಂದು, ಅರ್ಜಿದಾರರ ಟ್ರಾನ್ಸಫರ್ ಸರ್ಟಿಫಿಕೇಟ್ ನ ಯಥಾ ನಕಲನ್ನು ನಿಪಿ -10 ಎಂದು, ಎರಡು ಡಿಸ್ಚಾರ್ಜ ಸಮರಿಗಳ ದೃಢಿಕೃತ ನಕಲುಗಳನ್ನು ನಿಪಿ-11 ಮತ್ತು ನಿಪಿ-12 ಎಂದು, ಟ್ರಿಟಮೆಂಟ್ ಮತ್ತು ಡಿಸೆಬಿಲಿಟಿ ಸರ್ಟಿಫಿಕೇಟ್ ನ ದೃಢಿಕೃತ ನಕಲನ್ನು 2 ನೇ ಎದುರುದಾರ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಪಿ -13 ಎಂದು, ಟ್ರಿಟಮೆಂಟ್ ಸರ್ಟಿಫಿಕೇಟ್ ದೃಢಿಕೃತ ನಕಲನ್ನು ನಿಪಿ-14 ಎಂದು, 21 ಮೆಡಿಕಲ್ ಬಿಲ್ ಗಳನ್ನು ನಿಪಿ-15 ರಿಂದ ನಿಪಿ-35 ಎಂದು, ಎರಡು ಔಷಧಿ ಚೀಟಿಗಳನ್ನು ನಿಪಿ -36 ಮತ್ತು ನಿಪಿ-37 ಎಂದು, ಅರ್ಜಿದಾರರ ಆಧಾರ ಕಾರ್ಡಿನ ನೋಟರೈಜ್ ಪ್ರತಿಯನ್ನು ನಿಪಿ-38 ಎಂದು, ಅರ್ಜಿದಾರರ ಡಿಎಲ್ ನ ನೋಟರೈಜ್ ಪ್ರತಿಯನ್ನು ನಿಪಿ-39 ಎಂದು ಗುರುತಿಸಲಾಯಿತು . (ಸಾಕ್ಷಿ ನಿಪಿ-38 ಮತ್ತು ನಿಪಿ-39 ರ ದಾಖಲಾತಿಗಳ ಮೂಲ ಪ್ರತಿಗಳನ್ನು ಹಾಜರು ಪಡಿಸಿದ್ದು ನೋಟರೈಜ್ ಪ್ರತಿಯೊಂದಿಗೆ ತಾಳೆ ಮಾಡಿ ನೋಡಲಾಗಿ ಸರಿ ಇದ್ದು ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು. )

**ಪಾಟೀ ಸವಾಲುಃ 1 ನೇ ಎದುರುದಾರರ ಪರಃ ವಕೀಲರಿಂದ :**

1 ನೇ ಎದುರುದಾರಾಗಲೀ ಅವರ ವಕೀಲರಾಗಲೀ ಹಾಜರಿರುವುದಿಲ್ಲ , ಅವರನ್ನು ಯಾರು ಪ್ರತಿನಿಧಿಸಿರುವುದಿಲ್ಲ. ಆದ್ದರಿಂದ ಅವರ ಪಾಟೀ ಸವಾಲು ಇಲ್ಲವೆಂದು ತಿಳಿದುಕೊಳ್ಳಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎಸ್ ಎಮ್ ಬಿ ವಕೀಲರಿಂದ :**

4. ಅಪಘಾತದ ದಿನ ಓಡಿಸುತ್ತಿದ್ದ ಮೋಟಾರು ಸೈಕಲ್ ನನ್ನದೇ ಆಗಿರುತ್ತದೆ . ಅಪಘಾತ ಸಮಯದಲ್ಲಿ ನನ್ನ ವಾಹನಕ್ಕೆ ಫಿಟ್ ನೆಸ್ ಸರ್ಟಿಫಿಕೇಟ್ ಇತ್ತು ಹಾಗೂ ಇನ್ಸುರೆನ್ಸ ಇತ್ತು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ನನ್ನ ವಾಹನಕ್ಕೆ ಫಿಟ್ ನೆಸ್ ಸರ್ಟಿಫಿಕೇಟ್ ಹಾಗೂ ಇನ್ಸುರೆನ್ಸ ಪಾಲಿಸಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಅಪಘಾತ ಮಧ್ಯಾಹ್ನ 3 ಗಂಟೆಗೆ ನಡೆದಿರುತ್ತದೆ . ಅಪಘಾತ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿರುತ್ತದೆ ಎಂದರೆ ಸರಿ . ಕುಮಟಾದಿಂದ ಹೊನ್ನಾವರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತದೆ ಎಂದು ಹೇಳಲು ಬರುವುದಿಲ್ಲ. ನಾನು ಕುಮಟಾ ಕಡೆಯಿಂದ ಹೊನ್ನಾವರ ಕಡೆಗೆ ಹೋಗುತ್ತಿದ್ದೆ , ಲಾರಿ ಹೊನ್ನಾವರದ ಕಡೆಯಿಂದ ಎದುರುಗಡೆಯಿಂದ ಬರುತ್ತಿತ್ತು . ಅಲ್ಲಿ ಹೊನ್ನಾವರದ ಕಡೆಗೆ ಅರ್ಧ ಕಿಲೋಮೀಟರ್ ಹಾಗೂ ಕುಮಟಾದ ಕಡೆಗೆ ಅರ್ಧ ಕಿಲೋ ಮೀಟರ್ ರಸ್ತೆ ನೇರವಾಗಿತ್ತು . ರಸ್ತೆಯ ಎರಡು ಬದಿಗೆ ಎರಡು ಫೂಟ್ ಮಣ್ಣಿನ ರಸ್ತೆ ಇದೆ ಎಂದರೆ ಸರಿ . ನಾನು ಮೊದಲನೇ ಬಾರಿ ಲಾರಿಯನ್ನು ನೋಡಿದಾಗ 30 ಮೀಟರ್ ದೂರದಲ್ಲಿತ್ತು . ಮೋಟಾರು ಸೈಕಲ್ ನಲ್ಲಿ ನಾನು ಒಬ್ಬನೇ ಹೋಗುತ್ತಿದ್ದೆ . ಅಪಘಾತ ಸಮಯದಲ್ಲಿ ನನ್ನ ವಾಹನ ಹಾಗೂ ಲಾರಿ ಬಿಟ್ಟು ಲಾರಿ ಮುಂದುಗಡೆ ಬೇರೆ ವಾಹನ ಇತ್ತು . ಲಾರಿ ಮುಂದೆ ಕಾರು ಇತ್ತು . ಲಾರಿಯಿಂದ ಸುಮಾರು 10 ಮೀಟರ್ ದೂರದಲ್ಲಿತ್ತು . ನಾನು ಆ ದಿನ ದಿವಗಿಯಿಂದ ಹೊನ್ನಾವರಕ್ಕೆ ಹೋಗುತ್ತಿದ್ದೆ. ಅಪಘಾತಕ್ಕೆ ಸಂಬಂಧಪಟ್ಟಂತೆ ನಾನೇ ಪೋಲಿಸರಲ್ಲಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ಪುನಃ ನನ್ನ ಸಂಬಂಧಿಕರು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ಅಪಘಾತದ ನಂತರ ನನಗೆ ಪ್ರಜ್ಞೆ ತಪ್ಪಿತ್ತು . ಮಣಿಪಾಲ ಆಸ್ಪತ್ರೆಗೆ ಹೋದಾಗ ಅದೇ ದಿನ ಪ್ರಜ್ಞೆ ಬಂದಿರುತ್ತದೆ . ಅಲ್ಲಿ

ಪೋಲಿಸರು ಬಂದಿರಲಿಲ್ಲ. ನಾನು ಮಣಿಪಾಲ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬರುವವರೆಗೂ ಪೋಲಿಸರು ಬಂದಿರಲಿಲ್ಲ.

5. ಮಣಿಪಾಲ ಆಸ್ಪತ್ರೆಯಲ್ಲಿ ನನಗೆ ಡಾಃ ಕಿರಣ ಆಚಾರಿ ಚಿಕಿತ್ಸೆ ನೀಡಿರುತ್ತಾರೆ . ನಾನು ಅಪಘಾತ ಸಮಯದಲ್ಲಿ ಹೆಲ್ಮೆಟ್ ಹಾಕಿಕೊಂಡು ಮೋಟಾರು ಸೈಕಲ್ ಚಾಲನೆ ಮಾಡುತ್ತಿದ್ದೆ ಎಂದು ಇವತ್ತೇ ಪ್ರಥಮ ಬಾಡಿರಿ ಹೇಳುತ್ತಿದ್ದೇನೆ ಎಂದರೆ ಸರಿ . ಈ ನ್ಯಾಯಾಲಯದಲ್ಲಿ ಹೊರತು ಪಡಿಸಿ ನಾನು ಬೇರೆ ಯಾವುದೇ ನ್ಯಾಯಾಲಯದಲ್ಲಿ ಅಪಘಾತಕ್ಕೆ ಸಂಬಂಧಪಟ್ಟಂತೆ ಸಾಕ್ಷ ನುಡಿದಿಲ್ಲ .

6. ನಾನು ಕೃಷಿ ಕೂಲಿ, ಅಡಿಕೆ ಕೊನೆ ಸುಲಿಯುವ ಕೆಲಸ ಮಾಡುತ್ತಿದ್ದೆ ಹಾಗೂ ಪ್ರತಿ ದಿನ ಒಂದು ಸಾವಿರ ರುಪಾಯಿ ತಿಂಗಳಿಗೆ 30 ಸಾವಿರ ರುಪಾಯಿ ಆದಾಯ ಇತ್ತು ಎಂದು ನನ್ನ ಬಾಯಿಮಾತಿನ ಹೇಳಿಕೆಯನ್ನು ಹೊರತು ಪಡಿಸಿ ದಾಖಲಾತಿ ಇಲ್ಲ ಎಂದರೆ ಸರಿ. ಪರಿಹಾರ ಪಡೆಯಲು ನಾನು ಕೃಷಿ ಕೂಲಿ ಮಾಡುತ್ತಿದ್ದೆ ಅಡಿಕೆ ಕೊನೆ ಸುಲಿಯುತ್ತಿದ್ದೆ ಎಂದು ಅದರಿಂದ ಪ್ರತಿದಿನ ಸಾವಿರ ರೂಪಾಯಿ ತಿಂಗಳಿಗೆ 30 ಸಾವಿರ ರೂಪಾಯಿ ಆದಾಯವಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ನನ್ನ ಅರ್ಜಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತೋರಿಸಿದಷ್ಟು ದಿನ ಒಳರೋಗಿಯಾಗಿ ಚಿಕಿತ್ಸೆಗಾಗಿ ದಾಖಲಿರಲಿಲ್ಲ ಎಂದರೆ ಸರಿಯಲ್ಲ . ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತೋರಿಸಿದಷ್ಟು ಹಣವನ್ನು ಚಿಕಿತ್ಸೆಗಾಗಲೀ, ತಿರುಗಾಟಕ್ಕಾಗಲೀ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ . ಅಪಘಾತ ಸಮಯದಲ್ಲಿ ನಾನು ರಸ್ತೆಯಲ್ಲಿ ಬರುವ ವಾಹನಗಳನ್ನು ನೋಡದೆ ಏಕಾಏಕಿ ರಸ್ತೆ ಕ್ರಾಸ್ ಮಾಡಿದ್ದರಿಂದ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.ಲಾರಿ ಚಾಲಕ ತನ್ನ ವಾಹನವನ್ನು ರಸ್ತೆಯ ಎಡಗಡೆಯಿಂದ ನಿಧಾನವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಾನೇ ನನ್ನ ವಾಹನವನ್ನು ಅತೀವೇಗ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯದಿಂದ ನನಗೆ

ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಿಪಿ–13 ನಾನು ವೈದ್ಯರ ಮೇಲೆ ಪ್ರಭಾವ ಬೀರಿ ಸುಳ್ಳು ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಹಾಗೂ ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ಗಣೇಶ ಹೇರಂಭ ಹೆಗಡೆ ಎಂದರೆ ನನ್ನ ಅಣ್ಣ. ಲಾರಿ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ ಹಾಗೂ ಲಾರಿಗೆ ಫಿಟ್ ನೆಸ್ ಹಾಗೂ ಪರ್ಮಿಟ್ ಇರಲಿಲ್ಲ ಎಂದರೆ ಗೊತ್ತಿಲ್ಲ . ಆ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ.</u>

ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ನ್ಯಾಯಾಲಯವು ಅರ್ಜಿದಾರರ ಕಾಲಿಗೆ ಎಂಪುಟೇಶನ್ ಮತ್ತು ಎಡಗಾಲು ಪ್ರಾಕ್ಚರ ಆದ ಬಗ್ಗೆ ಜ್ಯುಡಿಶಿಯಲ್ ನೋಟ್ ತೆಗೆದುಕೊಳ್ಳುವಂತೆ ವಿನಂತಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.